# ಎಲ್ಲೂ ಹೋಗಲ್ಲ..



■ ನೇಸರ ಕಾಡನಕುಪ್ಪೆ

ಎಲ್ಲ ಸೇರಿ ನನ್ನನ್ನು ಊರು ಬಿಡಿಸಬೇಕು ಎಂದು ಪಿತೂರಿ ಮಾಡಿದ್ದರಲ್ಲ? ನಾನು ಅಷ್ಟೊಂದು ಸುಲಭವಾಗಿ ಬಕ್ರಾ ಆಗ್ತೀನಿ ಅಂದುಕೊಂಡಿರಾ! ಸಾಧ್ಯವೇ ಇಲ್ಲ. ನಾನು ಆನೆ! ನಾನು ಹುಟ್ಟಿ ಬೆಳೆದ ನನ್ನೂರು ನನಗೆ ಪ್ರಾಣಕ್ಕಿಂತಲೂ ಪ್ರಿಯ. ನಾನು ಕೊನೆವರೆಗೂ ಇಲ್ಲೇ ಇರುವವನೇ.!

ನನ್ನ ಹೆಸರು ಅಜ್ಜಯ್ಯ. ಅಜ್ಜಂದಿರು ಯಾರಿಗೆ ತಾನೇ ಇಷ್ಟವಾಗುವುದಿಲ್ಲ ಹೇಳಿ? ಜನ ಪ್ರೀತಿಯಿಂದ ಮಾತನಾಡಿಸುತ್ತಾರೆ. ಅವರದು ನಿಷ್ಕಲ್ಮಶ ಪ್ರೀತಿ. ನನ್ನದೂ ಅದೇ ಸ್ವಭಾವವಾಗಿರುವ ಕಾರಣ ನನಗೆ ಈ ಹೆಸರು ಬಂದಿದೆ. ಹಾಗೆಂದು, ಇದೇ ನನ್ನ ಹೆಸರು ಅಂದುಕೊಳ್ಳಬೇಡಿ. ನಾನು ಹುಟ್ಟಿದ್ದು ಕೊಡಗಿನಲ್ಲಿ. ನನಗೀಗ 30ರ ಹರೆಯ. ನನ್ನನ್ನು ಮಡಿಕೇರಿ ವಿಭಾಗದ ಮಾಲ್ದಾರೆಯಲ್ಲಿ 2007ರಲ್ಲಿ ಸೆರೆ ಹಿಡಿದಾಗ ನನಗಿಟ್ಟ ಹೆಸರು ಅಜೇಯ. ಅದಕ್ಕೇನು ಕಾರಣ ಗೊತ್ತೇ? ನಾನು ಆಗ ಅಲ್ಲಿನ ಪರಿಸರದಲ್ಲಿ ಪುಂಡ ಎಂದು ಹೆಸರು ಮಾಡಿದ್ದವನು. ನನ್ನ ಶೌರ್ಯ – ಸಾಹಸಗಳನ್ನು ಮೆಚ್ಚಿ ನನಗೆ ಅಜೇಯ ಎಂದು ಕರೆದರು. ಆದರೆ, ನಂತರ, ನಾನು ತೀರಾ ಸಾಧುವಾದೆ! ಹಾಗಾಗಿ, ಅಜೇಯ ಎಂಬ ನನ್ನ ಹೆಸರು ಎಲ್ಲರ ಬಾಯಲ್ಲಿ ಅಜ್ಜಯ್ಯ ಆಯಿತು! ಈಗ ಎಲ್ಲ ನನ್ನನ್ನು ಅಜ್ಜಯ್ಯ ಎಂದೇ ಕರೆಯುವುದು.

ನಾನೀಗ ಇರುವುದು ದುಬಾರೆ ಆನೆ ಶಿಬಿರದಲ್ಲಿ. ನನಗೆ ಗೆಳೆಯರಾಗಿ ಸೋದರ, ಸೋದರಿಯರಾಗಿ ಸಾಕಷ್ಟು ಆನೆಗಳು ಇಲ್ಲಿ ಇದ್ದಾವನ್ನಿ. ನಾವೆಲ್ಲ ಇಲ್ಲಿ ಬಹಳ ಸಂತೋಷದಿಂದ ಇದ್ದೇವೆ. ಏಕೆ ಗೊತ್ತೆ? ನಾವೆಲ್ಲಾ ಈ ಶಿಬಿರಕ್ಕೆ ಬಂದ ಮೇಲೆ ಪರಿಚಯಗೊಂಡವರಲ್ಲ. ಕಾಡಿನಲ್ಲಿ ಸ್ವಚ್ಛಂದವಾಗಿ ತಿರುಗಾಡಿ-ಕೊಂಡಿದ್ದಾಗಲೇ ನಾವು ಪರಿಚಿತರು. ಆಗಾಗ ಗದ್ದೆಗಳಿಗೆ ನುಗ್ಗಿ ಬಹಳ ಮಜಾ ತೆಗೆದುಕೊಳ್ಳುತ್ತಿದ್ದೆವು ಅನ್ನಿ. ಅರಣ್ಯ ಇಲಾಖೆಯವರು ನಮ್ಮನ್ನು ಪಿತೂರಿ ಮಾಡಿ ಹಿಡಿದಾಗ ಇಲ್ಲಿ ಬಂದು ಸೇರಿಕೊಂಡೆವು. ಆಗಿಂದಲೂ ಇದೇ ನನ್ನ ಜಾಗ, ನನ್ನ ಮನೆ.

ನನ್ನೊಂದಿಗೆ ಸೆರೆ ಹಿಡಿದ 7 ಆನೆಗಳು ದುಬಾರೆ ಶಿಬಿರದಲ್ಲೇ ಇವೆ. ನಮಗೂ ಮುಂಚೆ ಇಲ್ಲಿದ್ದ 20 ಆನೆಗಳೂ ಸೇರಿ, ನಮ್ಮದೀಗ 27 ಆನೆಗಳ ಕುಟುಂಬ. ಕಾವೇರಿ ಎಂಬ ಹೆಣ್ಣಾನೆಯ ಹೆಸರು ನೀವು ಕೇಳಿರಬಹುದಲ್ಲವೇ? ಅವಳು ದಸರಾ ಮೆರವಣಿಗೆಯಲ್ಲಿ ಕುಮ್ಕಿ ಆನೆಯಾಗಿ ಭಾಗವಹಿಸುತ್ತಾಳೆ. ಅವಳನ್ನು ಯಾರು ಅಂದುಕೊಂಡಿರಿ? ಅವಳೇ ನನ್ನ 'ಗರ್ಲ್ ಫ್ರೆಂಡ್!' ಅವಳು ಇದೇ ಶಿಬಿರದಲ್ಲಿ ಈಗಲೂ ಇರುವುದು. ಅದಕ್ಕಾಗೇ ನನಗೆ ಈ ಶಿಬಿರ ಬಹಳ ಇಷ್ಟವಾಗಿ ಬಿಟ್ಟಿದೆ. ಇಂತಹ ಶಿಬಿರದಿಂದ ನಾನೇಕೆ ಆಚೆ ಹೋಗಬೇಕು ಅಲ್ಲವೇ? ದಿನ ಬೆಳಗೆಲ್ಲಾ ಮೈ ಬಗ್ಗಿಸಿ ದುಡಿಯುವುದು, ಸಂಜೆಯಾಗುತ್ತಲೂ ಕಾವೇರಿಯ ಪಕ್ಕ ನಿಲ್ಲುವುದು. ಇದಕ್ಕಿಂತ ಸ್ವರ್ಗ ಬೇರೇನಾದರೂ ಇದೆಯೇ?